**PW_8**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

ಚಿತ್ರದುರ್ಗ

ಸಿ.ಸಿ.**2350/2021**

| | | |
|---|---|---|
| ಸಾಕ್ಷಿದಾರರ ಹೆಸರು | - ನೂರುಲ್ಲಾ | PW:8 |
| ತಂದೆ ಹೆಸರು | - ನಜೀರ್ ಸಾಬ್ | CW:26 |
| ವಯಸ್ಸು | - 50 ವರ್ಷ | ಪ್ರಮಾಣ ವಚನ ಬೋದಿಸಿದ |
| ಉದ್ಯೋಗ | - ವ್ಯಾಪಾರ | ದಿ: 02/07/2026 |
| ವಾಸ | - ಶಿವಮೊಗ್ಗ | |

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. 2012-13 ರಲ್ಲಿ ಐಸಿಐಸಿಐ ಬ್ಯಾಂಕ್ ಚಿತ್ರದುರ್ಗ ಶಾಖೆಯಿಂದ ನನಗೆ ನೋಟೀಸ್ ನೀಡಿದ್ದು ನಾನು ಬ್ಯಾಂಕ್ ಗೆ ಹೋಗಿರಲಿಲ್ಲ ನಂತರ 1 ತಿಂಗಳ ನಂತರ ಪುನಃ ಸದರಿ ಬ್ಯಾಂಕ್ ನ ನೋಟೀಸ್ ಬಂದಿತ್ತು. ಮಾರನೇ ದಿನ ನಾನು ಐಸಿಐಸಿಐ ಬ್ಯಾಂಕ್ ಚಿತ್ರದುರ್ಗ ಶಾಖೆಗೆ ಹೋಗಿದ್ದೆ. ನಾನು ಬ್ಯಾಂಕ್ ಗೆ ಹೋದಾಗ ಬ್ಯಾಂಕ್ ನಲ್ಲಿ ದಾಖಲೆ ತೋರಿಸಿ ಸದರಿ ದಾಖಲೆಯಲ್ಲಿ ಕಾಣಿಸಿದ ವ್ಯಕ್ತಿ ನೀವಾ ಎಂದು ಕೇಳಿದ್ದು ಸದರಿ ವ್ಯಕ್ತಿ ಹೆಸರು ಸಯ್ಯದ್ ನೂರುಲ್ಲಾ ತಂದೆ ಅಪೀಸ್ ಸಾಬ್ ಎಂದು ಇದ್ದು ಅದು ನಾನಲ್ಲ ಎಂದು ನಾನು ವಾಪಸ್ಸು ಬಂದಿದ್ದೆ. ಈ ಪ್ರಕರಣಕ್ಕೆ ಸಂಬಂದಿಸಿದಂತೆ ನನಗೆ ಮಾಹಿತಿ ಇದೆ ಎಂಬ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಯಾವುದೇ ಹೇಳಿಕೆ ನೀಡಿಲ್ಲ.

**( ಈ ಹಂತದಲ್ಲಿ ಸ.ಸ. ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**PW_8**

**<u>ಪಾಟೀ ಸವಾಲು : ಸ.ಸ. ಅಭಿಯೋಜಕರಿಂದ</u>**

2. ಈಕೇಸಿನ ಬಗ್ಗೆ ನನಗೆ ಏನು ಗೊತ್ತಿಲ್ಲ ಎಂದು ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದು ನನಗೆ ಗೊತ್ತಿಲ್ಲ ಎಂದು ನಾನು ಆ ದಿನವೇ ಪೊಲೀಸರಿಗೆ ಹೇಳಿಕೆ ನೀಡಿದ್ದೆ ಎಂದರೆ ಸರಿ . ಆ ನಂತರ ನನಗೆ ವಿಷಯ ತಿಳಿದು ಸದರಿ ದಾಖಲೆ ಅರ್ಜಿ ಮತ್ತು ಗುರುತಿನ ಚೀಟಿಯಲ್ಲಿ ಕಂಡ ವ್ಯಕ್ತಿ ನಾನೇ ಎಂದು ಪೊಲೀಸರಿಗೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ಹೇಳಿಕೆಯನ್ನು ಓದಿ ಹೇಳಲಾಗಿದ್ದು ಸಾಕ್ಷಿ ಅಲ್ಲಗಳೆದಿದ್ದು ನಿಪಿ.125 ಎಂದು ಗುರುತಿಸಲಾಯಿತು. ನಿಪಿ.125 ರ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿಯ ಪರ ವಕೀಲರಿಂದಃ</u>**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**<u>ಮರುವಿಚಾರಣೆಃ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**